ಚುಕ್ಕೆ ಗುರುತಿಲ್ಲದ ಪ್ರಶ್ನೆ

ಅನುಬಂಧ-1

ಬಿಳಿಗಿರಿ ರಂಗನ ಬೆಟ್ಟದ ಪ್ರದೇಶವನ್ನು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸುವ ಬಗ್ಗೆ

ಸಂಖ್ಯೆ (186) 35 ಶ್ರೀ ಬಾಲರಾಜ್ ಎಸ್ (ಕೊಳ್ಳೇಗಾಲ)

ಮಾನ್ಯ ಪ್ರವಾಸೋದ್ಯಮ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ಸಚಿವರುಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ಯಳಂದೂರು ತಾಲ್ಲೂಕಿನ ಬಿಳಿಗಿರಿರಂಗನ ಬೆಟ್ಟದ ಪ್ರದೇಶವನ್ನು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧ ಪಡಿಸಲು ಮನವಿಗಳು ಬಂದಿವೆಯೇ,

ಆ) ಬಂದಿದ್ದಲ್ಲಿ, ಯಾರಿಂದ ಹಾಗೂ ಯಾವಾಗ ಬಂದಿದೆ,

ಇ) ಈ ಮನವಿಗಳ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಪ್ರವಾಸೋದ್ಯಮ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು

ಅ) ಬಂದಿವೆ

ಆ) ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯಿಂದ ಕಳೆದ ಸಾಲಿನಲ್ಲಿ ಬಿ ಆರ್ ಹಿಲ್ಸ್ ಅನ್ನು ಒಳಗೊಂಡಂತೆ ಜಿಲ್ಲೆಯ ಪ್ರಮುಖ ಪ್ರವಾಸಿ ತಾಣಗಳ ಅಭಿವೃದ್ಧಿಗಾಗಿ ಯೋಜನೆಯೊಂದನ್ನು ತಯಾರಿಸಿ ಅದನ್ನು ಪ್ರವಾಸೋದ್ಯಮ ಇಲಾಖೆಗೆ ಸಲ್ಲಿಸಿರುತ್ತಾರೆ

ಇ) ಚಾಮರಾಜನಗರ ಜಿಲ್ಲೆಯ ಎಲ್ಲಾ ಪ್ರವಾಸಿ ಸ್ಥಳಗಳ ಬಗ್ಗೆ ಈಗಾಗಲೇ ಇಲಾಖೆಯು ಪ್ರಾರ ಕೈಗೊಂಡಿದ್ದು ಮಾಹಿತಿ ಮಡಿಕೆಗಳನ್ನು ಮುದ್ರಿಸಿ ಪ್ರವಾಸಿಗರಿಗೆ ಹಂಚಲಾಗುತ್ತಿದೆ ಬಿ ಆರ್ ಹಿಲ್ಸ್‌ನ ಕೆ ಗುಡಿ ಎಂಬಲ್ಲಿ ಉನ್ನತ ದರ್ಜೆಯ ವಸತಿ ಸೌಕರ್ಯ ನಿರ್ಮಿಸಿ ಜಂಗಲ್ ಲಾಡ್ಜಸ್ ಸಂಸ್ಥೆಯ ವತಿಯಿಂದ ನಡೆಸಲಾಗುತ್ತಿದೆ

ಇದಲ್ಲದೆ ಬಿಳಿಗಿರಿರಂಗನ ಬೆಟ್ಟದಲ್ಲಿ ಒಂದು ಉಪಹಾರ ಗೃಹವನ್ನು ನಿರ್ಮಿಸಲಾಗಿದ್ದು ಇದನ್ನು ಖಾಸಗೀಕರಣಗೊಳಿಸಲಾಗಿದೆ ಹಾಗೂ ಇಲ್ಲಿ ಒಂದು ಯಾತ್ರಿ ನಿವಾಸವನ್ನು ನಿರ್ಮಿಸಲು ಯೋಜನೆಯನ್ನು

ಪ್ರಶ್ನೆ ಸಂಖ್ಯೆ (187) 36 ಶ್ರೀ ಬಾಲರಾಜ್ ಎಸ್ (ಕೊಳ್ಳೇಗಾಲ)

ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

1 ಕೊಳ್ಳೇಗಾಲ ಮತ್ತು ಯಳಂದೂರು ಪಟ್ಟಣಗಳಲ್ಲಿ ಒಳಚರಂಡಿ ವ್ಯವಸ್ಥೆ ಇಲ್ಲದೇ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2 ಈ ದಿಸೆಯಲ್ಲಿ ಮನವಿಗಳನ್ನು ಸಲ್ಲಿಸಿದಾಗ್ಯೂ ಇದುವರೆವಿಗೂ ಕೆಲಸಗಳನ್ನು ಪ್ರಾರಂಭಿಸದಿರಲು ಕಾರಣಗಳೇನು?

3 ಎಂದಿನಿಂದ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಲಾಗುವುದು?

ಶ್ರೀ ಹೆಚ್ ಡಿ ಕುಮಾರಸ್ವಾಮಿ ಮಾನ್ಯ ಮುಖ್ಯಮಂತ್ರಿ

1) ಹೌದು

2) ಕೊಳ್ಳೇಗಾಲ ಪಟ್ಟಣದಲ್ಲಿ ಹಾಲಿ ಶೇಕಡ 40 ರಷ್ಟು ಪ್ರದೇಶದಲ್ಲಿ ಒಳಚರಂಡಿ ವ್ಯವಸ್ಥೆ ಇದ್ದು, ಇನ್ನು ಉಳಿದ ಭಾಗಕ್ಕೆ ಸಮಗ್ರ ಒಳಚರಂಡಿ ಯೋಜನೆಯನ್ನು ಕಲ್ಪಿಸಲು ಸರ್ವೆ ಕಾಮಗಾರಿಗೆ ಬೇಕಾಗುವ ಹಣವನ್ನು ನಗರಸಭೆ ಕೊಳ್ಳೇಗಾಲ ಇವರು ದಿನಾಂಕ 24–03–2007ರಲ್ಲಿ ರೂ 2 00 ಲಕ್ಷಗಳನ್ನು ಹಾಗೂ ದಿನಾಂಕ 22–05–2007ರಲ್ಲಿ ರೂ 3 00 ಲಕ್ಷಗಳನ್ನು ಮಂಡಳಿಗೆ ಪಾವತಿಸಿರುತ್ತಾರೆ ಸದರಿ ಒಳಚರಂಡಿ ಯೋಜನೆ ಕಲ್ಪಿಸಲು ಸರ್ವೆ ಕಾರ್ಯ ಪ್ರಗತಿಯಲ್ಲಿದೆ ಯಳಂದೂರು ಪಟ್ಟಣಕ್ಕೆ ಒಳಚರಂಡಿ ಅಳವಡಿಸಬೇಕಾದರೆ ನೀರು ಸರಬರಾಜು ಕನಿಷ್ಠ ತಲಾ ದಿನಂಪ್ರತಿ 100 ಲೀಟರ್ ಇರಬೇಕಾಗುತ್ತದೆ ಈಗ ತಲಾ ದಿನಂಪ್ರತಿ 30 ಲೀಟರ್ ಮಾತ್ರ ಇರುತ್ತದೆ ಆದ್ದರಿಂದ, ಈಗ ನೀರು ಸರಬರಾಜು ಯೋಜನೆಯಡಿ ರೂ 747 00 ಲಕ್ಷಗಳ ಅಂದಾಜಿಗೆ ಸರ್ಕಾರ ಆಡಳಿತಾತ್ಮಕ ಅನುಮೋದನೆ ನೀಡಿದ್ದು,